**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 570/2023**

**ಪಿಡಬ್ಲ್ಯೂ-1**
**ಸಿಡಬ್ಲ್ಯೂ-2**

**ಸಾಕ್ಷಿಗೆ ದಿನಾಂಕ 27-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು : ಲೋಕೇಶಪ್ಪ

ತಂದೆಯ ಹೆಸರು : ಅನಂತಪ್ಪ

ವಯಸ್ಸು : 48 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಬುರುಡೇಕಟ್ಟೆ

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ಪರಿಚಯಿ ಇದ್ದು ಅವರು ನಮ್ಮ ಗ್ರಾಮದವರು. ಚಾ.ಸಾ-3 ರವರ ಪರಿಚಯ ಇರುವುದಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ಇರುವ ಸಹಿ ನನ್ನದಾಗಿರುತ್ತದೆ. **ಸದರಿ ದಾಖಲಾತಿಯು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ)ಎಂದು ಗುರುತಿಸಲಾಯಿತು.** ನಿ.ಪಿ-1 ಕ್ಕೆ ನಾನು 2 ವರ್ಷಗಳ ಹಿಂದೆ ಹೊಸದುರ್ಗ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ಅಮಾನತ್ತು ಮಾಡಿಕೊಂಡಿರುವುದಿಲ್ಲ. ನಿಪಿ-1 ರಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಸ್ವತ್ತುಗಳನ್ನು ನೋಡಿ ಗುರುತಿಸಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ದಿನಾಂಕ 04-01-2023 ರಂದು ರಾತ್ರಿ ಸುಮಾರು 8-20 ಗಂಟೆ ಸಮಯದಲ್ಲಿ ನಾನು ಮತ್ತು ಚಾ.ಸಾ-3 ರವರು ಹೊಸದುರ್ಗ ಟೌನ್ ಬಸ್ ನಿಲ್ದಾಣದ ಹತ್ತಿರ ನಿಂತಿರುವಾಗ ಚಾ.ಸಾ-1 ರವರು ನಮ್ಮನ್ನು ಪೊಲೀಸ್ ಠಾಣೆಗೆ ಬರಮಾಡಿಕೊಂಡರು ಎಂದರೆ ಸರಿಯಲ್ಲ. ಚಾ.ಸಾ-1 ರವರಿಗೆ ಬುರುಡೇಕಟ್ಟೆ ಗ್ರಾಮದ ರಾಘವೇಂದ್ರ ಬಿನ್ ಸತೀಶ ಇವರು ತನ್ನ ಕೆಎ-16-ಇ-6749 ನೇ ಮೋಟಾರ್ ಸೈಕಲ್‌ನಲ್ಲಿ ಸರ್ಕಾರದ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮದ್ಯದ ಪೌಚ್‌ಗಳನ್ನು ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಮತ್ತು ತನ್ನ ಚಿಲ್ಲರೆ ಅಂಗಡಿಗೆ ಬರುವ ಸಾರ್ವಜನಿಕರಿಗೆ ಅಕ್ರಮವಾಗಿ ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುತ್ತಾರೆ ಎಂದು ಬಾತ್ಮಿ ಬಂದಿದ್ದು ದಾಳಿ ಮಾಡುವ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ನಮಗೆ ಕೋರಿದ್ದು ನಾವು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ನಂತರ ಚಾ.ಸಾ-1 ಮತ್ತು ಸಿಬ್ಬಂದಿಗಳೊಡನೆ ಇಲಾಖಾ ಜೀಪು ವಾಹನದಲ್ಲಿ ಮಾಹಿತಿ ಬಂದ ಹೊಸದುರ್ಗ ಟೌನ್ ಹಳೇ ಬಸ್ ನಿಲ್ದಾಣದ ಬಳಿ ಹೋಗಿ ಮರೆಯಲ್ಲಿ ನಿಂತು ನೋಡಿದಾಗ ಒಬ್ಬ ಆಸಾಮಿ ತನ್ನ ಮೋಟಾರ್ ಸೈಕಲ್‌ನಲ್ಲಿ ಒಂದು ಚೀಲ ಇಟ್ಟುಕೊಂಡಿದ್ದವನು ಸಮವಸ್ತ್ರದಲ್ಲಿ ಇದ್ದ ಅಧಿಕಾರಿಗಳನ್ನು ನೋಡಿ ಮೋಟಾರ್ ಸೈಕಲ್ ಮತ್ತು ಚೀಲವನ್ನು ಅಲ್ಲಿಯೇ ಬಿಟ್ಟು ಓಡಿಹೋದನು, ಹಿಡಿಯಲು ಸಾಧ್ಯವಾಗಲಿಲ್ಲ ಎಂದರೆ ಸರಿಯಲ್ಲ. ನಂತರ ಓಡಿ ಹೋದ ಆಸಾಮಿ ನಮ್ಮ ಊರಿನವನಾಗಿದ್ದು ಆತನ ಹೆಸರು ರಾಘವೇಂದ್ರ ತಂದೆ ಸತೀಶ, 32 ವರ್ಷ, ಬುರುಡೇಕಟ್ಟೆ ಗ್ರಾಮ ಎಂದು ತಿಳಿಸಿದೆವು ಎಂದರೆ ಸರಿಯಲ್ಲ. ನಂತರ ಸ್ಥಳಕ್ಕೆ ಹೋಗಿ ನೋಡಲಾಗಿ ಕೆಎ-16-ಇ-6749 ನೇ ಮೋಟಾರ್ ಸೈಕಲ್‌ನಲ್ಲಿ ಇದ್ದು ಅದರ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇತ್ತು ಎಂದರೆ ಸರಿಯಲ್ಲ. ಚೀಲವನ್ನು ಪರಿಶೀಲಿಸಿದಾಗ ಸ್ಥಳದಲ್ಲಿ 90 ಎಂ ಎಲ್ ನ 46 ರಾಜಾ ವಿಸ್ಕಿಯ ಪೌಚ್‌ಗಳು, 180 ಎಂ ಎಲ್ ನ 24 ಬಿ.ಪಿ ಕಂಪನಿಯ ಮದ್ಯದ ಪೌಚ್‌ಗಳು ಹಾಗೂ 180 ಎಂ ಎಲ್ ನ 24 ಒ.ಟಿ. ಕಂಪನಿಯ ಮದ್ಯದ ಪೌಚ್‌ಗಳು ಇರುವುದು ಕಂಡುಬಂತು ಎಂದರೆ ಸರಿಯಲ್ಲ. ಸದರಿ ಮದ್ಯ ಸಂಗ್ರಹಣೆ ಮಾಡಿದ ಬಗ್ಗೆ ಆರೋಪಿ ಬಳಿ ಯಾವುದೇ ದಾಖಲೆ ಅಥವಾ ರಹದಾರಿಪತ್ರ ಇರುವುದಿಲ್ಲ ಎಂದು ಖಚಿತಪಡಿಸಿಕೊಂಡು ದೊರೆತ ಎಲ್ಲಾ ಮದ್ಯದ ಪೌಚ್ ಗಳನ್ನು ರಾಸಾಯನಿಕ

ಪರೀಕ್ಷೆಗಾಗಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಮಾದರಿಗೆ ತೆಗೆದು ಚೀಲದಿಂದ ಸುತ್ತಿ ದಾರದಿಂದ ಕಟ್ಟಿ ಕೆ.ಎಸ್.ಪಿ ಎಂಬ ಅರಗು ಸೀಲು ಕ್ರಮ ಜರುಗಿಸಲಾಯಿತು ಎಂದರೆ ಸರಿಯಲ್ಲ. ಮಹಜರ್ ಕ್ರಮವನ್ನು ನಿಪಿ-1 ರಂತೆ ರಾತ್ರಿ 8-35 ರಿಂದ 9-35 ರವರೆಗೆ ಬರೆದು ಮುಗಿಸಿದರು ಎಂದರೆ ಸರಿಯಲ್ಲ. ನಿಪಿ-1 ಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಈಗ ಓದಿ ಹೇಳಿದಂತೆ ನಾನು ಈ ಬಗ್ಗೆ ದಿನಾಂಕ 04-01-2023 ರಂದು ಪೊಲೀಸರ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ ಕಾರಣ ನಿಪಿ-2 ಎಂದು ಗುರುತಿಸಲಾಯಿತು.**

ಆರೋಪಿ ನಮ್ಮ ಊರಿನವನಾದ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ದಾಳಿ ಸಮಯದಲ್ಲಿ ಹಾಜರಿದ್ದು ನಿಪಿ-2 ರಂತೆ ಹೇಳಿಕೆ ನೀಡಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್.ವೈ. ವಕೀಲರಿಂದ**

**ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಏನೂ ಇಲ್ಲ ಎಂದು ಸಲ್ಲಿಸುತ್ತಾರೆ.**

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**(ಪ್ರಸನ್ನಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ ಎಂ ಎಫ್ ಸಿ**
**ನ್ಯಾಯಾಲಯ,ಹೊಸದುರ್ಗ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 570/2023**

**ಪಿಡಬ್ಲ್ಯೂ-2**
**ಸಿಡಬ್ಲ್ಯೂ-3**

**ಸಾಕ್ಷಿಗೆ ದಿನಾಂಕ 27-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು : ಸತೀಶ
ತಂದೆಯ ಹೆಸರು : ತಿಪ್ಪೇಶಪ್ಪ
ವಯಸ್ಸು : 50 ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಬಾಗೂರು

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನಾನು ಈ ಮೊದಲು ನೋಡಿರುವುದಿಲ್ಲ. ಚಾ.ಸಾ-2 ರವರ ಪರಿಚಯ ಇರುವುದಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ಇರುವ ಸಹಿ ನನ್ನದಾಗಿರುತ್ತದೆ. **ಸದರಿ ದಾಖಲಾತಿಯು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ)ಎಂದು ಗುರುತಿಸಲಾಯಿತು.** ನಿ.ಪಿ-1 ಕ್ಕೆ ನಾನು 2 ವರ್ಷಗಳ ಹಿಂದೆ ಹೊಸದುರ್ಗ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ಅಮಾನತ್ತು ಮಾಡಿಕೊಂಡಿರುವುದಿಲ್ಲ. ನಿಪಿ-1 ರಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಸ್ವತ್ತುಗಳನ್ನು ನೋಡಿ ಗುರುತಿಸಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ದಿನಾಂಕ 04-01-2023 ರಂದು ರಾತ್ರಿ ಸುಮಾರು 8-20 ಗಂಟೆ ಸಮಯದಲ್ಲಿ ನಾನು ಮತ್ತು ಚಾ.ಸಾ-2 ರವರು ಹೊಸದುರ್ಗ ಟೌನ್ ಬಸ್ ನಿಲ್ದಾಣದ ಹತ್ತಿರ ನಿಂತಿರುವಾಗ ಚಾ.ಸಾ-1 ರವರು ನಮ್ಮನ್ನು ಪೊಲೀಸ್ ಠಾಣೆಗೆ ಬರಮಾಡಿಕೊಂಡರು ಎಂದರೆ ಸರಿಯಲ್ಲ. ಚಾ.ಸಾ-1 ರವರಿಗೆ ಬುರುಡೇಕಟ್ಟೆ ಗ್ರಾಮದ ರಾಘವೇಂದ್ರ ಬಿನ್ ಸತೀಶ ಇವರು ತನ್ನ ಕೆಎ-16-ಇ-6749 ನೇ ಮೋಟಾರ್ ಸೈಕಲ್‌ನಲ್ಲಿ ಸರ್ಕಾರದ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮದ್ಯದ ಪೌಚ್‌ಗಳನ್ನು ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಮತ್ತು ತನ್ನ ಚಿಲ್ಲರೆ ಅಂಗಡಿಗೆ ಬರುವ ಸಾರ್ವಜನಿಕರಿಗೆ ಅಕ್ರಮವಾಗಿ ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುತ್ತಾರೆ ಎಂದು ಬಾತ್ಮಿ ಬಂದಿದ್ದು ದಾಳಿ ಮಾಡುವ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ನಮಗೆ ಕೋರಿದ್ದು ನಾವು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ನಂತರ ಚಾ.ಸಾ-1 ಮತ್ತು ಸಿಬ್ಬಂದಿಗಳೊಡನೆ ಇಲಾಖಾ ಜೀಪು ವಾಹನದಲ್ಲಿ ಮಾಹಿತಿ ಬಂದ ಹೊಸದುರ್ಗ ಟೌನ್ ಹಳೇ ಬಸ್ ನಿಲ್ದಾಣದ ಬಳಿ ಹೋಗಿ ಮರೆಯಲ್ಲಿ ನಿಂತು ನೋಡಿದಾಗ ಒಬ್ಬ ಆಸಾಮಿ ತನ್ನ ಮೋಟಾರ್ ಸೈಕಲ್‌ನಲ್ಲಿ ಒಂದು ಚೀಲ ಇಟ್ಟುಕೊಂಡಿದ್ದವನು ಸಮವಸ್ತ್ರದಲ್ಲಿ ಇದ್ದ ಅಧಿಕಾರಿಗಳನ್ನು ನೋಡಿ ಮೋಟಾರ್ ಸೈಕಲ್ ಮತ್ತು ಚೀಲವನ್ನು ಅಲ್ಲಿಯೇ ಬಿಟ್ಟು ಓಡಿಹೋದನು, ಹಿಡಿಯಲು ಸಾಧ್ಯವಾಗಲಿಲ್ಲ ಎಂದರೆ ಸರಿಯಲ್ಲ. ನಂತರ ಓಡಿ ಹೋದ ಆಸಾಮಿ ಚಾ.ಸಾ-2 ರವರ ಊರಿನವನಾಗಿದ್ದು ಆತನ ಹೆಸರು ರಾಘವೇಂದ್ರ ತಂದೆ ಸತೀಶ, 32 ವರ್ಷ, ಬುರುಡೇಕಟ್ಟೆ ಗ್ರಾಮ ಎಂದು ತಿಳಿಸಿದೆವು ಎಂದರೆ ಸರಿಯಲ್ಲ. ನಂತರ ಸ್ಥಳಕ್ಕೆ ಹೋಗಿ ನೋಡಲಾಗಿ ಕೆಎ-16-ಇ-6749 ನೇ ಮೋಟಾರ್ ಸೈಕಲ್‌ನಲ್ಲಿ ಇದ್ದು ಅದರ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇತ್ತು ಎಂದರೆ ಸರಿಯಲ್ಲ. ಚೀಲವನ್ನು ಪರಿಶೀಲಿಸಿದಾಗ ಸ್ಥಳದಲ್ಲಿ 90 ಎಂ ಎಲ್ ನ 46 ರಾಜಾ ವಿಸ್ಕಿಯ ಪೌಚ್‌ಗಳು, 180 ಎಂ ಎಲ್ ನ 24 ಬಿ.ಪಿ ಕಂಪನಿಯ ಮದ್ಯದ ಪೌಚ್‌ಗಳು ಹಾಗೂ 180 ಎಂ ಎಲ್ ನ 24 ಒ.ಟಿ. ಕಂಪನಿಯ ಮದ್ಯದ ಪೌಚ್‌ಗಳು ಇರುವುದು ಕಂಡುಬಂತು ಎಂದರೆ ಸರಿಯಲ್ಲ. ಸದರಿ ಮದ್ಯ ಸಂಗ್ರಹಣೆ ಮಾಡಿದ ಬಗ್ಗೆ ಆರೋಪಿ ಬಳಿ ಯಾವುದೇ ದಾಖಲೆ ಅಥವಾ ರಹದಾರಿಪತ್ರ ಇರುವುದಿಲ್ಲ ಎಂದು ಖಚಿತಪಡಿಸಿಕೊಂಡು ದೊರೆತ ಎಲ್ಲಾ ಮದ್ಯದ ಪೌಚ್ ಗಳನ್ನು ರಾಸಾಯನಿಕ

ಪರೀಕ್ಷೆಗಾಗಿ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಮಾದರಿಗೆ ತೆಗೆದು ಚೀಲದಿಂದ ಸುತ್ತಿ ದಾರದಿಂದ ಕಟ್ಟಿ ಕೆ.ಎಸ್.ಪಿ ಎಂಬ ಅರಗು ಸೀಲು ಕ್ರಮ ಜರುಗಿಸಲಾಯಿತು ಎಂದರೆ ಸರಿಯಲ್ಲ. ಮಹಜರ್ ಕ್ರಮವನ್ನು ನಿಪಿ-1 ರಂತೆ ರಾತ್ರಿ 8-35 ರಿಂದ 9-35 ರವರೆಗೆ ಬರೆದು ಮುಗಿಸಿದರು ಎಂದರೆ ಸರಿಯಲ್ಲ. ನಿಪಿ-1 ಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಈಗ ಓದಿ ಹೇಳಿದಂತೆ ನಾನು ಈ ಬಗ್ಗೆ ದಿನಾಂಕ 04-01-2023 ರಂದು ಪೊಲೀಸರ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ ಕಾರಣ ನಿಪಿ-3 ಎಂದು ಗುರುತಿಸಲಾಯಿತು.**

ಆರೋಪಿ ನಮ್ಮ ಊರಿನವನಾದ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ದಾಳಿ ಸಮಯದಲ್ಲಿ ಹಾಜರಿದ್ದು ನಿಪಿ-3 ರಂತೆ ಹೇಳಿಕೆ ನೀಡಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್.ವೈ. ವಕೀಲರಿಂದ**

**ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಏನೂ ಇಲ್ಲ ಎಂದು ಸಲ್ಲಿಸುತ್ತಾರೆ.**

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**(ಪ್ರಸನ್ನಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ ಎಂ ಎಫ್ ಸಿ**
**ನ್ಯಾಯಾಲಯ,ಹೊಸದುರ್ಗ.**